ಶ್ರೀ ಎಂ. ಪಿ. ಪ್ರಕಾಶ್.—ಈ ರೀತಿ ಪರಿಹಾರವನ್ನು ಕೊಡುವಾಗ ಅವನಿಗೆ ಇನ್ನೂ ಎಷ್ಟು ಸರ್ವೀಸ್ ಇತ್ತು ? ಎಷ್ಟು ದಿವಸ ಕಾಲ ಬದುಕಬಲ್ಲವನಾಗಿದ್ದ, ಎಷ್ಟು ಸಂಪಾದನೆ ಮಾಡುತ್ತಿದ್ದ ಎಂದು ಮುಂತಾಗಿ ನೋಡಿ ಅದರಮೇಲೆ ಪರಿಹಾರವನ್ನು ಕೊಡುತ್ತೇವೆ.

ಶ್ರೀ ಎಂ, ಆನಂದರಾವ್.—ಸ್ವಾಮಿ, ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಫಸ್ಟ್ ಏಯ್ಡ್ ಬಾಕ್ಸ್ ಇರುತ್ತದೆ. ಆದರೆ ಅದರಲ್ಲಿ ಯಾವುದೇ ಔಷಧಿಯೂ ಇರುವುದಿಲ್ಲ. ಇದನ್ನು ಇಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಮತ್ತು ಡ್ರೈವರ್ ಹಾಗೂ ಕಂಡಕ್ಟರ್‌ಗಳಿಗೆ ಈ ಫಸ್ಟ್ ಏಯ್ಡ್ ಮಾಡುವುದು ಹೇಗೆ ಎಂದು ತರಬೇತಿಯನ್ನು ಕೊಟ್ಟಿರುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಡ್ರೈವರ್ ಅಥವಾ ಕಂಡಕ್ಟರ್‌ಗಳನ್ನು ನಾವು ನೇಮಕ ಮಾಡಿಕೊಳ್ಳುವಾಗ ಸಂದರ್ಭದಲ್ಲಿ ಇದನ್ನೆಲ್ಲಾ ನೋಡುತ್ತೇವೆ. ಅವರು ಕೆಲಸಕ್ಕೆ ಸೇರುವುದಕ್ಕೆ ಮುಂಚಿತವಾಗಿಯೇ ಸೇಂಟ್ ಜಾನ್ಸ್ ಆಂಬುಲೆನ್ಸ್ ಸಂಸ್ಥೆಯಿಂದ ಅವರು ಫಸ್ಟ್ ಏಯ್ಡ್ ತರಬೇತಿಯನ್ನು ಮಾಡಿಕೊಂಡ ಬಗ್ಗೆ ಪ್ರಮಾಣಪತ್ರಗಳನ್ನು ತರಬೇಕಾಗುತ್ತದೆ. ಇನ್ನು ತಾವು ಹೇಳಿದಂತೆ ಫಸ್ಟ್ ಏಯ್ಡ್ ಬಾಕ್ಸ್‌ನಲ್ಲಿ ಔಷಧಿ ಮತ್ತು ಹತ್ತಿ ಮುಂತಾದುವನ್ನು ಇಡುವಂತೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ, ಅಪಘಾತದಲ್ಲಿ ಸತ್ತವರ ಕುಟುಂಬದವರಿಗೆ ಯಾರಿಗಾದರೂ ನಿಮ್ಮ ಸಂಸ್ಥೆಯಲ್ಲಿ ಕೆಲಸವನ್ನು ಕೊಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಸತ್ತವರ ಕುಟುಂಬದವರಿಗೆ ಕೆಲಸವನ್ನು ಕೊಡಬೇಕೆಂದು ಕಾನೂನ್ನು ಏನೂ ಇಲ್ಲ. ಆದರೆ ಮಾನವೀಯತೆಯ ದೃಷ್ಟಿಯಿಂದ ಕೊಟ್ಟರೆ ಕೊಡಬಹುದು.

ಚು. ಪ್ರ. 1739

ಚು. ಪ್ರ. 1217

ಅಧ್ಯಕ್ಷರು.—ಈ ಎರಡು ಪ್ರಶ್ನೆಗಳನ್ನೂ ಮುಂದಕ್ಕೆ ಹಾಕಿದ್ದೇನೆ:

Sanction of Hudco Houses in Siddlaghatta Taluk

Sri V. Muniyappa (Sidlaghatta)—

612 (1419) Will the Minister for Law and Parliamentary Affairs and Housing be pleased to state :—

(a) the number of Hudco Houses sanctioned under the special component programme in Sidlaghatta Taluk and the year in which they have been sanctioned ;

(b) whether the construction of the above houses have been completed ?

ಶ್ರೀ ಎ, ಮುನಿಯಪ್ಪ.—ಸ್ವಾಮಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಎಸ್. ದೇವಿಗನಹಳ್ಳಿ ಎಂದು ಇದೆ. ಗ್ರೂಪ್ ಹೌಸಿಂಗ್ ಸ್ಕೀಂನಲ್ಲಿ ಒಂದೊಂದು ಮನೆಗೆ 3500 ರೂಪಾಯಿಗಳ ಪ್ರಕಾರ 30 ಮನೆಗಳನ್ನು ಕಟ್ಟಿಸಿಕೊಡಲು ಜಿಲ್ಲಾಧಿಕಾರಿಯವರು ಆ ಪ್ರದೇಶವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮಂಜೂರು ಮಾಡಿದ್ದಾರೆ. ಬಿ.ಡಿ.ಓ. ಅವರೂ ಮತ್ತು ಸಂಬಂಧಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರೂ ಮತ್ತು ಕಂಟ್ರಾಕ್ಟರ್‌ಗಳೂ ಸೇರಿಕೊಂಡು ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ಹಣವನ್ನೂ ತೆಗೆದುಕೊಂಡಿದ್ದಾರೆ. ಆದರೆ ಅಲ್ಲಿ ಇದುವರೆಗೆ ಯಾವುದೇ ಮನೆಯೂ ಪೂರ್ತಿಯಾಗಿಲ್ಲ. ಇದನ್ನು ತಾವು ಪರಿಶೀಲಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಹೌಸಿಂಗ್‌ನಲ್ಲಿ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಪ್ರೋಗಾಂ ಪ್ರಕಾರ ನಮ್ಮಲ್ಲಿ ಈ ಯೋಜನೆ ಯಾವುದೂ ಇಲ್ಲ. ಅಲ್ಲಿಯ ಜಿಲ್ಲಾಧಿಕಾರಿಯವರು ಇನ್ನು ಯಾವ ಬಾಬಿನಲ್ಲಿ

ಆ ಮನೆಗಳನ್ನು ಕಟ್ಟುವುದಕ್ಕೆ ಜಾಗವನ್ನು ತೆಗೆದುಕೊಂಡಿದ್ದಾರೋ ಅದು ನನಗೆ ಗೊತ್ತಿಲ್ಲ. ಆದರೂ ಈ ವಿಷಯದ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಯವರಿಂದ ವರದಿಯನ್ನು ತರಿಸಿಕೊಂಡು ತಮಗೆ ತಿಳಿಸುತ್ತೇನೆ.

Loan and subsidy given to Industries in the State by the Khadi and Village Industries Board.

Sri L. T. Thimmappa Hegde (Sagar)--

616 (1281) Will the Minister for Industries be pleased to state :--

(a) the number of Industries functioning with the help of loan and subsidy provided by the Karnataka State Khadi and Village Industries Board in the State (Details) ;

(b) out of them, the number of Industries which are in sound conditions and repaying loan ;

(c) the number of Industries which are not repaying the loans and the number of new Industries started during the last one year and the number of old Industries to which loan and subsidy have been given ?

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ,—ಮಾನ್ಯ ಅಧ್ಯಕ್ಷರೇ ಒಟ್ಟು 8864 ಘಟಕಗಳಲ್ಲಿ 75 ಘಟಕಗಳು ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಇದರಿಂದಾಗಿ ಎಷ್ಟು ಹಣ ಹೋಯಿತು. ಈ ಹಣವನ್ನು ವಸೂಲು ಮಾಡಲಿಕ್ಕೆ ಸಾಧ್ಯವಾಗಲಿಲ್ಲವೇ ? ಪೂರ್ತಿ ಹಣ ಹೋಯಿತೇ ಎನ್ನುವ ವಿಚಾರವನ್ನು ಹೇಳಬೇಕು, ಎರಡನೆಯದಾಗಿ, 3,816 ಘಟಕಗಳು ಸುಸ್ಥಿತಿಯಲ್ಲಿ ಇದ್ದು. ಇನ್ನು 5048 ಘಟಕಗಳು ಸುಸ್ಥಿತಿಯಲ್ಲಿ ಇಲ್ಲವೆಂದರೆ ಅವು ಮುಳಿಗಿ ಹೋದ ಹಾಗೆಯೇ ಸರಿ ಎಂದು ಹೇಳುತ್ತೀರಾ? ಅಥವಾ ಮರುಪಾವತಿ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದಕ್ಕೆ ವಿವರಗಳನ್ನು ಕೊಡಬೇಕು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತೇವೆಂದು ಖಾದಿ ಕಮಿಷನ್‌ರವರು ಹೇಳುತ್ತಿರುವಾಗ, ರಾಜ್ಯದಲ್ಲಿ ಖಾದಿ ಗ್ರಾಮೋದ್ಯೋಗ ಮಂಡಲಿಯವರು ಸರಿಯಾಗಿ ಕೆಲಸ ಮಾಡದೆಹೋದರೆ ಅನುದಾನ ಪಡೆಯುವಲ್ಲಿ ಅವರು ಹಿಂದೆ ಬೀಳತಕ್ಕಂಥ ಪರಿಸ್ಥಿತಿ ಉದ್ಭವವಾಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.---ಕೆಲಸ ನಿಲ್ಲಿಸಿರತಕ್ಕಂಥ ಘಟಕಗಳಿಂದ ಮಾತ್ರ ಮರುಪಾವತಿ ಮಾಡತಕ್ಕಂಥದ್ದು ಇರುತ್ತದೆ. ಮರುಪಾವತಿ ಮಾಡಲು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದೇವೆ, ನೋಟೀಸ್ ಕೊಟ್ಟಿದ್ದೇವೆ, ಆಸ್ತಿಯನ್ನು ಮುಟ್ಟುಗೋಲು ಮಾಡಿಕೊಂಡಿರುತ್ತೇವೆ. ಆದರೆ ಇದರಲ್ಲಿ ಕೆಲವೊಂದು ತಿದ್ದುಪಡಿಗಳು ಆಗತಕ್ಕಂಥದ್ದು ಅವಶ್ಯಕತೆ ಇರುತ್ತದೆ, ಅದು ಮುಂದಿನ ವರ್ಷ ಬರುತ್ತದೆ. ಹಣವನ್ನು ವಸೂಲು ಮಾಡುವುದಕ್ಕಾಗಿ ಅಧಿಕಾರ ಮತ್ತು ಕಾನೂನು ಎರಡನ್ನೂ ಅಧಿಕಾರಿಗಳಿಗೆ ಕೊಡಬೇಕಾಗಿದೆ, ಮತ್ತೆ ಈ ವರ್ಷ ಹೆಚ್ಚಿನ ಸಂಸ್ಥೆಗಳಿಗೆ ಹಣವನ್ನು ಒದಗಿಸಿಕೊಡತಕ್ಕಂಥ ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಮತ್ತೆ ಖಾದಿ ಕಮೀಷನ್ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ಖಾದಿ ಬೋರ್ಡ್ ಎರಡು ವರ್ಷಗಳಿಂದ ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿರುತ್ತದೆ. ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಖಾದಿ ಕಮಿಷನ್‌ನಿಂದ ಪಡೆದುಕೊಳ್ಳಲು ಪ್ರಯತ್ನ ಪಡುತ್ತೇವೆಂದು ತಿಳಿಸುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಖಾದಿ ಗ್ರಾಮೋದ್ಯೋಗದ ಬಗ್ಗೆ ಉತ್ತರ ಕರ್ನಾಟಕದ ಕಡೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿದ್ದು, ಹಳೇ ಮೈಸೂರು ಕಡೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಿಲ್ಲವೆನ್ನುವ ದೂರು ಬಂದಿರತಕ್ಕಂಥದ್ದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇ?